# ಪ್ರಾರ್ಥನೆ

## ಶ್ರೀಶಾರದಾದೇವಿ ಧ್ಯಾನ

ಧ್ಯಾಯೇಚ್ಚಿತ್ತಸರೋಜಸ್ಥಾಂ
ಸುಖಾಸೀನಾಂ ಕೃಪಾಮಯೀಮ್ ।
ಪ್ರಸನ್ನವದನಾಂ ದೇವೀಂ
ದ್ವಿಭುಜಾಂ ಸ್ಥಿರಲೋಚನಾಮ್ ॥

ಹೃದಯಕಮಲದಲ್ಲಿ ಸುಖಾಸೀನಳಾಗಿರುವ, ಕೃಪಾಮಯಿಯೂ ಸ್ಥಿರವಾದ ದೃಷ್ಟಿಯುಳ್ಳವಳೂ, ಪ್ರಸನ್ನವದನಳೂ, ಎರಡು ಭುಜವುಳ್ಳವಳೂ ಆದ ದೇವಿಯನ್ನು ಧ್ಯಾನಿಸಬೇಕು.

ಆಲುಲಾಯಿತ ಕೇಶಾರ್ಧ-
ವಕ್ಷಸ್ಥಲವಿಮಂಡಿತಾಮ್ ।
ಶುಭ್ರಾಂ ಜ್ಯೋತಿರ್ಮಯೀಂ
ಜೀವಪಾಪಸಂತಾಪಹಾರಿಣೀಮ್ ॥

ಉದ್ದವಾದ ಕೇಶದಿಂದ ಅರ್ಧ ವಕ್ಷಸ್ಥಳವನ್ನು ಮರೆಮಾಚಿಕೊಂಡಿರುವ, ಉಳಿದ ಅರ್ಧವನ್ನು ಬಿಳಿಯ ಬಟ್ಟೆಯಿಂದ ಮುಚ್ಚಿಕೊಂಡಿರುವ, ಚಿನ್ನದ ಆಭರಣಗಳಿಂದ ಅಲಂಕೃತಳಾದ, ಜೀವಿಗಳ ಪಾಪಗಳನ್ನೂ, ದುಃಖವನ್ನೂ ದೂರ ಮಾಡುವ ದೇವಿಯನ್ನು ಧ್ಯಾನಿಸತಕ್ಕದ್ದು.

ರಾಮಕೃಷ್ಣಗತಪ್ರಾಣಾಂ
ತನ್ನಾಮಶ್ರವಣಪ್ರಿಯಾಮ್ ।
ತದ್ಭಾವರಂಜಿತಾಕಾರಾಂ
ಜಗನ್ಮಾತೃಸ್ವರೂಪಿಣೀಮ್ ॥

ಯಾರ ಪ್ರಾಣವು ಶ್ರೀರಾಮಕೃಷ್ಣರಲ್ಲಿಯೇ ಸೇರಿಹೋಗಿದೆಯೋ, ಯಾರಿಗೆ ಶ್ರೀರಾಮಕೃಷ್ಣರ ಹೆಸರು ಕೇಳಲು ಬಹುವಾಗಿ ರುಚಿಸುವುದೋ, ಶ್ರೀರಾಮಕೃಷ್ಣರ ದಿವ್ಯಭಾವಗಳಿಂದ ಯಾರ ರೂಪವು ರಂಜಿಸುವುದೋ, ಯಾರು ಜಗನ್ಮಾತೆಯ ಸ್ವರೂಪವೇ ಆಗಿರುವಳೋ ಅಂತಹ ದೇವಿಯನ್ನು ಧ್ಯಾನಿಸಬೇಕು.

ಜಾನಕೀರಾಧಿಕಾರೂಪ
ಧಾರಿಣೀಂ ಸರ್ವಮಂಗಲಾಮ್ ।
ಚಿನ್ಮಯೀಂ ವರದಾಂ ನಿತ್ಯಾಂ
ಶಾರದಾಂ ಮೋಕ್ಷದಾಯಿನೀಮ್ ॥

ಯಾರು ಒಂದೇ ಸೀತೆ, ರಾಧೆಯರ ರೂಪಗಳನ್ನು ಧರಿಸಿದ್ದಳೋ, ಅಂತಹ ಎಲ್ಲ ಮಂಗಳಗಳ ಸ್ವರೂಪಿಯೂ, ಚಿನ್ಮಯಿಯೂ ವರದಾತೆಯೂ, ಮೋಕ್ಷದಾತೆಯೂ, ಶಾಶ್ವತಳೂ ಆದ ಶಾರದೆಯನ್ನು ಧ್ಯಾನಿಸಬೇಕು. – **ಸ್ವಾಮಿ ಅಭೇದಾನಂದ**

# ಸೂಕ್ತಿಪ್ರಭ

## ಶ್ರೀಮಾತಾ ವಚನಸುಧೆ

**ನಾ**ನು ದುಷ್ಟರಿಗೂ ತಾಯಿ, ಗುಣವಂತರಿಗೂ ತಾಯಿ, ಹೆದರಬೇಡ; ಕಷ್ಟದಲ್ಲಿದ್ದಾಗಲೆಲ್ಲ ನಿನ್ನಷ್ಟಕ್ಕೆ ಹೇಳಿಕೋ, 'ನನಗೊಬ್ಬಳು ತಾಯಿ ಇದ್ದಾಳೆ' ಎಂದು.

**ನ**ನ್ನ ಕರುಣೆಯನ್ನು ಪಡೆಯದವನು ನಿಜಕ್ಕೂ ದುರದೃಷ್ಟವಂತ. ನಾನು ಕರುಣೆ ತೋರದ ಯಾವ ವ್ಯಕ್ತಿಯೂ, ಅಷ್ಟೇಕೆ, ಒಂದು ಕೀಟವೂ ಇಲ್ಲ.

**ಹ**ಲವು ಸಲ ಕರುಣೆಯಲ್ಲಿ ನನ್ನನ್ನು ನಾನೇ ಮರೆತುಬಿಡುತ್ತೇನೆ. ನನಗೆ ನಾನಾರೆಂಬುದೇ ನೆನಪಿರುವುದಿಲ್ಲ.

**ಮ**ಗು, ನಿಮ್ಮಲ್ಲಿ ಯಾರಿಗಾದರೂ ಒಂದು ಸಣ್ಣ ಮುಳ್ಳು ಚುಚ್ಚಿದರೂ ಸಾಕು, ನನ್ನ ಎದೆಗೆ ಕತ್ತಿಯಿಂದ ತಿವಿದಂತಾಗುತ್ತದೆ.

**ನ**ನ್ನ ಮಕ್ಕಳಿಗಾಗಿ ಯಾವುದೇ ನಿಯಮವನ್ನೂ ಮೀರಬಲ್ಲೆ. ನನ್ನ ಮಕ್ಕಳಿಗಾಗಿ ನಾನು ಏನನ್ನು ಬೇಕಾದರೂ ಮಾಡಬಲ್ಲೆ. ಅದರಲ್ಲೇನೂ ದೋಷವಿಲ್ಲ.

**ಯಾ**ರಾದರೂ ನನ್ನ ಹತ್ತಿರ ಬಂದು 'ಅಮ್ಮ' ಎಂದು ಕರೆದರೆ ನನ್ನಿಂದ ಸುಮ್ಮನಿರಲು ಸಾಧ್ಯವಿಲ್ಲ.

**ನ**ನ್ನ ಮಗುವೊಂದು ಮಣ್ಣಿನಲ್ಲಾಡಿ ಕೊಳೆ ಮಾಡಿಕೊಂಡಿತು ಎಂದಿಟ್ಟುಕೋ. ಆಗ ಅದನ್ನು ತೊಳೆದು ತೋಳಿನಲ್ಲಿ ಎತ್ತಿಕೊಳ್ಳಬೇಕಾದವಳು ನಾನೇ ಹೊರತು, ಬೇರೆ ಯಾರೂ ಅಲ್ಲ. ತಪ್ಪು ಮಾಡುವುದು ಮನುಷ್ಯನ ಸ್ವಭಾವ. ಆದರೆ ದೂರುವ ಎಷ್ಟು ಜನಕ್ಕೆ ತಾನೇ ತಿದ್ದಲು ಸಾಧ್ಯ?

**ಏ**ನು ಮಗು? ನೀನು ಈ ಸಮಯದಲ್ಲಿ ಬಂದೆ ಅಂತ ಗೋಲಾಪ್ ನಿನ್ನನ್ನು ಬೈದಳೇ? ನೋಡು, ಇದೆಲ್ಲ ಶ್ರೀರಾಮಕೃಷ್ಣರ ರಾಜ್ಯ. ಇಲ್ಲಿ ಯಾವ ಕಾನೂನೂ ನಡೆಯುವುದಿಲ್ಲ. ಇಲ್ಲಿ ಬಾಗಿಲು ಎಲ್ಲರಿಗೂ, ಯಾವಾಗಲೂ ತೆರೆದಿರುತ್ತದೆ. ಯಾವಾಗ ಬೇಕಾದರೂ ನನ್ನನ್ನು ಕರೆಯಬಹುದು. ಮಗು, ಅವಳು ಬೈದದ್ದನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಡ.

(ತಮ್ಮ ವಿಶ್ರಾಂತಿಯ ಸಮಯದಲ್ಲಿ ಬಂದುದಕ್ಕಾಗಿ ಗೋಲಾಪ್ ಮಾಳಿಂದ ಬೈಯಿಸಿಕೊಂಡ ಭಕ್ತಳಿಗೆ)

ಮಗು, ಇಲ್ಲಿಗೆ ಬರುವವರಲ್ಲಿ ಎಷ್ಟೋ ಜನ ಎಂಥೆಂಥವರೋ ಇದ್ದಾರೆ. ಅವರು ಮಾಡದೆ ಇರುವ ಪಾಪವೇ ಇಲ್ಲ. ಆದರೆ ಅವರು ಇಲ್ಲಿಗೆ ಬಂದು ನನ್ನನ್ನು 'ಅಮ್ಮ' ಎಂದು ಕರೆದಾಗ ನಾನು ಎಲ್ಲವನ್ನೂ ಮರೆತುಬಿಡುತ್ತೇನೆ. ಅವರ ಯೋಗ್ಯತೆಗಿಂತಲೂ ಹೆಚ್ಚಾಗಿಯೇ ಅವರು ಇಲ್ಲಿಂದ ಪಡೆಯುತ್ತಾರೆ.